ಮಾತುಕತೆ

# ಬಟಾಬಯಲಲ್ಲಿ ಕನ್ನಡದ ಮಕ್ಕಳ ಕತ್ತು ಹಿಸುಕಲಾಗುತ್ತಿದೆ

## ಕೇಂದ್ರ ಸಾಹಿತ್ಯ ಅಕಾಡೆಮಿ 'ಬಾಲ ಸಾಹಿತ್ಯ ಪುರಸ್ಕಾರ' ಪುರಸ್ಕೃತ ಕೃಷ್ಣಮೂರ್ತಿ ಬಿಳಿಗೆರೆ ಸಂದರ್ಶನ



ಶಿವಲಿಂಗಪ್ಪ ಹಂದಿಹಾಳ್

◆ **ಬೇರೆಯವರಿಗಿಂತ ಭಿನ್ನವಾಗಿ ಹಸಿರು, ಪರಿಸರ, ಕೃಷಿ, ಮಣ್ಣು ನಿಮ್ಮ ಸಾಹಿತ್ಯದಲ್ಲಿ ತುಂಬಿಕೊಂಡಿರುವುದು ಕಾಣುತ್ತದೆ. ನೀವೇ ಸ್ವತಃ ಪ್ರಯೋಗಶೀಲ ಕೃಷಿಕರು, ಮಣ್ಣಿನ ಪ್ರೀತಿಯ ಕಾಯಕದವರು. ನಿಮ್ಮೊಳಗಿನ ಆ ಅನುಭವ, ಜ್ಞಾನ, ಕನಸುಗಳನ್ನು ಮಕ್ಕಳಿಗೆ ಮುಟ್ಟಿಸಲು ಪಣತೊಟ್ಟಂತಿದೆ. ಕವಿತೆಗಳು, ನಾಟಕಗಳು, ಕಥೆಗಳು ಎಲ್ಲವೂ ಈ ಮಣ್ಣಿನ ಪ್ರೀತಿಯನ್ನೇ ತುಂಬಿಕೊಂಡಿವೆ. ಈ ಪ್ರೀತಿ ನಿಮ್ಮೊಳಗೆ ತುಂಬಿಕೊಂಡಿದ್ದು ಹೇಗೆ?**

ನೀವು ಕೇಳುತ್ತಿರುವ ಈ ಪ್ರಶ್ನೆ ಒಂದಲ್ಲ, ಅನೇಕ ಪ್ರಶ್ನೆಗಳ ಗುಚ್ಛ. ಸಹಜವಾಗಿ ನನ್ನ ಉತ್ತರ ಒಂದಾಗಿರಲು ಸಾಧ್ಯವಿಲ್ಲ. ನೀವು ಕೇಳಿರುವ ಪ್ರಶ್ನೆಗಳಲ್ಲಿ ಉತ್ತರವೂ ಅಡಗಿದೆ ಎಂಬುದೂ ನಿಜ. ನೀವೇ ಪ್ರಸ್ತಾಪಿಸಿರುವಂತೆ ನಾನು ಬಾಲ್ಯದಿಂದ ಇಲ್ಲಿನವರೆಗೂ ಮಣ್ಣು ಬಿಟ್ಟು ಅಲ್ಲಾಡಿಲ್ಲ. ಆ ಅವಕಾಶ ನನಗೆ ಸಿಕ್ಕಿತು. ಅದನ್ನು ಎಲ್ಲ ಆಕರ್ಷಣೆಗಳನ್ನೂ ಮೀರಿ ಸದರೀ ಅವಕಾಶವನ್ನು ಬಾಚಿ ತಬ್ಬಿಕೊಂಡೆ. ಅದರ ಪರಿಣಾಮ ನನ್ನ ಒಳಗೆ ಅವ್ವ ಅಪ್ಪ ಹಾಗೂ ಹಳ್ಳಿಯ ಜನರ ಹಸಿರು ಪ್ರೀತಿಯೊಂದಿಗೆ ಬೆವರ ಬದ್ಧತೆ ಮನೆ ಮಾಡಿದವು. ನನ್ನ ಬರಹಗಳ ತುಂಬಾ ಮಣ್ಣು–ಎರೆಹುಳಗಳೇ ತುಂಬಿರುವುದಕ್ಕೆ ಇದೇ ಕಾರಣ. ಬಾಲ್ಯಕಾಲದ ಆಟ ಪಾಠಗಳ, ನೀರು ನೆರಳುಗಳ, ಹೊಲ ತೋಟಗಳ, ಕೆರೆ ಕಟ್ಟೆ ಹಳ್ಳಗಳ, ರೈತಾಪಿ ಜನರ ಪಡಿಪಾಟಲುಗಳ